ವಿಶ್ವವಾಣಿ

ಸಂಪಾದಕೀಯ

ಮಹಿಳೆಯರ ಬಗ್ಗೆ ಹಗುರ ಮಾತು ಸಲ್ಲ

ದೇಶದಲ್ಲಿ 100ಕ್ಕೂ ಹೆಚ್ಚು ಲೋಕಸಭೆ ಕ್ಷೇತ್ರಗಳಲ್ಲಿ ಮಹಿಳಾ ಮತದಾರರೇ ಹೆಚ್ಚಿದ್ದಾರೆ. ಅನೇಕ ಕ್ಷೇತ್ರಗಳಲ್ಲಿ ಮಹಿಳಾ ಅಭ್ಯರ್ಥಿಗಳೇ ಪುರುಷ ಅಭ್ಯರ್ಥಿಗಳಿಗೂ ಟಕ್ಕರ್ ಕೊಡುತ್ತಿದ್ದಾರೆ. ರಾಜಕೀಯ ಪಕ್ಷಗಳು ಕೂಡ ಮಹಿಳೆಯರ ಮತಗಳನ್ನೇ ಪಡೆಯಲು ಇನ್ನಿಲ್ಲದ ಕಸರತ್ತು ನಡೆಸಿವೆ. ಆದರೆ ಕೆಲ ರಾಜಕಾರಣಿಗಳಿಂದ ಮಹಿಳೆಯರ ಕುರಿತು ಕೀಳುಮಟ್ಟದ ಹೇಳಿಕೆಗಳು ಮಾತ್ರ ನಿಲ್ಲುತ್ತಿಲ್ಲ. ಚುನಾವಣೆಯ ಪ್ರಚಾರದ ಭರದಲ್ಲಿ ಬಿಜೆಪಿಯ ಮುಖಂಡ ದಿಲೀಪ್ ಘೋಷ್ ಅವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಉದ್ದೇಶಿಸಿ ತೀರಾ ಆಕ್ಷೇಪಾರ್ಹವಾದ ಮಾತುಗಳನ್ನು ಆಡಿದ್ದಾರೆ. ಕಾಂಗ್ರೆಸ್ ಹಿರಿಯ ಮುಖಂಡ ಶಾಮನೂರು ಶಿವಶಂಕರಪ್ಪ ಅವರು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ವರದಿಯಾಗಿದೆ. ಎರಡೂ ರಾಷ್ಟ್ರೀಯ ಪಕ್ಷಗಳ ಪ್ರತಿನಿಧಿಗಳು ಮಹಿಳೆಯರ ಬಗ್ಗೆ ಆಡಿದ ನಿಂದನಾತ್ಮಕ ಮಾತುಗಳು ರಾಷ್ಟ್ರದ ಗಮನ ಸೆಳೆದಿವೆ. ಎರಡೂ ಹೇಳಿಕೆಗಳು ತೀರಾ ಕೆಳಮಟ್ಟದವು. ಸಮಾಜದಲ್ಲಿ ಇರುವ ಪುರುಷಪ್ರಧಾನ ಮನಃಸ್ಥಿತಿ ಇಂತಹ ಮಾತುಗಳಿಗೆ ಕಾರಣ. ಇಂತಹ ಮಾತುಗಳು ರಾಜಕಾರಣದಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಅಗೌರವದಿಂದ ಕಾಣಲು ಯತ್ನಿಸುತ್ತವೆ. ತಮ್ಮ ಮಾತುಗಳು ವಿವಾದಕ್ಕೆ ತಿರುಗಿದಾಗ ಅಥವಾ ಅವುಗಳಿಗೆ ಪ್ರತಿರೋಧ ಎದುರಾದಾಗ ಹೊಣೆಯಿಂದ ನುಣುಚಿಕೊಳ್ಳಲು 'ನನ್ನ ಹೇಳಿಕೆಯನ್ನು ತಿರುಚಲಾಗಿದೆ' ಎಂಬ ಹೇಳಿಕೆ ಕೊಡುವುದು ಸಾಮಾನ್ಯವಾಗಿದೆ. ಅಸಭ್ಯವಾಗಿ ಮಾತನಾಡಿದ ನಿದರ್ಶನಗಳನ್ನು ರಾಜಕೀಯ ಪಕ್ಷಗಳು ಗಂಭೀರವಾಗಿ ಪರಿಗಣಿಸಿ, ಅಂತಹ ಮಾತುಗಳಿಂದ ಅಂತರ ಕಾಯ್ದುಕೊಳ್ಳಬೇಕು ಹಾಗೂ ಅಂತಹ ಮಾತು ಆಡಿದವರ ವಿರುದ್ಧ ಕ್ರಮ ಜರುಗಿಸಬೇಕು. ಮಹಿಳೆಯರ ಘನತೆಗೆ ಕುಂದು ಬಾರದಂತೆ ನೋಡಿಕೊಳ್ಳುವ ಕೆಲಸವು ರಾಜಕಾರಣದಲ್ಲಿ ಆಗಬೇಕು. ಮರ್ಯಾದೆ ಕೊಡದವರ ವಿರುದ್ಧ ಕ್ರಮ ಕೈಗೊಳ್ಳಲು ಪಕ್ಷಗಳು ವಿಫಲವಾದರೆ, ಅಂಥವರಿಗೆ ಪಾಠ ಕಲಿಸುವ ಕೆಲಸವನ್ನು ಮತದಾರರು ಮಾಡಬೇಕು.

ಸೊಂಪಾದಕೀಯ

ಗುಡಿಯ ನೋಡಿರಣ್ಣಾ

ನಮ್ಮ ದೇಶದಲ್ಲಿ ಜನ ಅತಿ ಹೆಚ್ಚು ಪ್ರೀತಿಸೋದು, ದೇವರ ಮಟ್ಟಕ್ಕೆ ಕೊಂಡೊಯ್ಯೋದು ಸಿನಿಮಾ ತಾರೆಗಳನ್ನ ಮತ್ತು ಕ್ರಿಕೆಟ್ ಆಟಗಾರರನ್ನ. ಅದರಲ್ಲೂ ದಕ್ಷಿಣ ಭಾರತದಲ್ಲಿ ಸಿನಿಮಾ ನಟ ನಟಿಯರ ಮೇಲಿನ ಕ್ರೇಜ್ ತುಂಬಾ ದೊಡ್ಡದು. ಕರ್ನಾಟಕದಲ್ಲಿ ಡಾ. ರಾಜ್ ಕುಮಾರ್ ಅವರ ಮೇಲೆ ಜನ ಇಟ್ಟಿರೋ ಪ್ರೀತಿ ಎಲ್ಲರಿಗೂ ಗೊತ್ತು. ಅದರಂತೆ ರಜನಿಕಾಂತ್ , ಎನ್ ಟಿ ಆರ್, ಎಂಜಿಆರ್ ಗಳೂ ಜನರ ಪ್ರೀತಿಯ ಸಾಗರದಲ್ಲಿ ಮಿಂದೆದ್ದವರೇ. ಇಂಥ ಫೇಮಸ್ ಸ್ಟಾರ್‌ಗಳ ಹೆಸರಿನಲ್ಲಿ ಅನೇಕ ಒಳ್ಳೆಯ ಕೆಲಸಗಳೂ ಆಗುತ್ತವೆ. ಜೊತೆಗೆ ಇವರ ಹೆಸರುಗಳು ಮತ್ತು ಪ್ರತಿಮೆಗಳು ಆಯಾ ರಾಜ್ಯದ ಎಲ್ಲಾ ಕಡೆ ರಾರಾಜಿಸುತ್ತವೆ. ಕರ್ನಾಟಕದಲ್ಲಿ ಅದೆಷ್ಟು ರಸ್ತೆಗಳಿಗೆ ರಾಜ್ ಕುಮಾರ್ ಅವರ ಹೆಸರಿದೆ, ಅದೆಷ್ಟು ರಸ್ತೆ, ಸರ್ಕಲ್‌ಗಳಲ್ಲಿ ರಾಜ್ ಅವರ ಪ್ರತಿಮೆ ಇದೆ ಅಂತ ಕಂಡು ಹಿಡಿಯೋಕೆ ಸೆನ್ಸಸ್ ಮಾಡಬೇಕಾಗಿ ಬರುತ್ತದೆ. ಆದರೆ ಅದ್ಯಾಕೆ ಹೀಗೆ ರಸ್ತೆಗಳಿಗೆ ಹೆಸರಿಡೋದು, ಪ್ರತಿಮೆ ಇಡೋದು ಇವೆಲ್ಲ ಪುರುಷ ನಟರಿಗೆ ಮಾತ್ರ ಆಗುತ್ತದೆ ಅನ್ನೋದು ಆಸಕ್ತಿಕರ. ಹೀರೋಯಿನ್‌ಗಳ ಹೆಸರು ರಸ್ತೆಗೆ ಇಟ್ಟಿದ್ದು, ಹೀರೋಯಿನ್‌ಗಳ ಪ್ರತಿಮೆ ನಿರ್ಮಿಸಿರೋದು ತೀರಾ ಕಮ್ಮಿ. ಹಾಗಂತ ಸಿನಿಮಾಗಳಂತೆ ನಮ್ಮ ಸಮಾಜ ಕೂಡಾ ಪುರುಷ ಪ್ರಧಾನ ಅಂತ ತೀರ್ಮಾನ ಮಾಡೋಹಾಗಿಲ್ಲ. ಯಾಕಂದ್ರೆ, ಹೀರೋಯಿನ್‌ಗಳನ್ನು ನಮ್ಮ ಪ್ರೇಕ್ಷಕ ಪ್ರಭು ಆರಾಧಿಸಿದ ಎಷ್ಟೋ ಉದಾಹರಣೆಗಳಿವೆ. ಶ್ರೀದೇವಿ, ಮಾಧುರಿ ದೀಕ್ಷಿತ್, ನಮ್ಮ ಕನ್ನಡದ ಮಾಲಾಶ್ರೀ ಅವರು ಅನೇಕ ಪ್ರೇಕ್ಷಕರ ಕನಸಿನ ರಾಣಿಯರು. ಮಾಲಾಶ್ರೀ ಅವರಿಗೆ, ನಟಿ ಸೌಂದರ್ಯ ಅವರಿಗೆ ದೇವಸ್ಥಾನ ಕಟ್ಟಿಸುತ್ತೇವೆ ಅನ್ನೋ ಮಟ್ಟಕ್ಕೆ ಅವರ ಕ್ರೇಜ್ ಇತ್ತು. ಅದು ಈ ಕಾಲದ ಸನ್ನಿ ಲಿಯೋನಿವರೆಗೂ ಇದೆ. ಈಗ ಸದ್ಯಕ್ಕೆ ನಟಿ ಸಮಂತಾ ಅವರಿಗೆ ಅಭಿಮಾನಿಯೊಬ್ಬ ಆಂಧ್ರದಲ್ಲಿ ದೇವಸ್ಥಾನ ಕಟ್ಟಿಸಿದ್ದಾನಂತೆ. ಅಲ್ಲಿಗೆ ಸಿನಿ ಪ್ರೇಕ್ಷಕರ ಅಭಿಮಾನದಲ್ಲಿ ಕೊಂಚ ಮಟ್ಟಿಗಿನ ಲಿಂಗ ಭೇಧ ಇದ್ದರೂ ಹೀರೋಯಿನ್ ಗಳನ್ನು ಕೊಂಚ ಕಡೆಗಣಿಸಿದರೂ ಕೆಲವು ಅದೃಷ್ಟವಂತ ಹೀರೋಯಿನ್ ಗಳಿಗಾದರೂ ದೇವಸ್ಥಾನ ಕಟ್ಟಿಸಿಕೊಳ್ಳುವ ಭಾಗ್ಯ ಇರುತ್ತದೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ನಾಯ್ಡು ಅನುಕರಣೀಯರು!

ಏರ್ ಇಂಡಿಯಾ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ರಾಜಕಾರಣಿಗಳು ವಿಮಾನವೇರಲು ತಡವಾಗಿ ಆಗಮಿಸುವುದು ಸಾಮಾನ್ಯವಾಗಿತ್ತು. ಅದರಲ್ಲೂ ಕೇಂದ್ರ ಮಂತ್ರಿಗಳು, ನಾಗರಿಕ ವಿಮಾನಯಾನ ಖಾತೆ ಸಚಿವರು, ಮುಖ್ಯಮಂತ್ರಿಗಳಿಗೆ ವಿಮಾನ ಗಂಟೆಗಟ್ಟಲೆ ಕಾಯುತ್ತಿತ್ತು. ಪ್ರಯಾಣಿಕರು ಕಮಕ್-ಕಿಮಕ್ ಅನ್ನುತ್ತಿರಲಿಲ್ಲ. ಅದು ಆಗ ಸುದ್ದಿಯಾಗುತ್ತಿರಲಿಲ್ಲ, ಕಾರಣ ಪ್ರಯಾಣಿಕರಿಗೆ ಬೇರೆ ವಿಮಾನವಿರಲಿಲ್ಲ, ಕಾಯುವುದು ಅನಿವಾರ್ಯವಾಗಿತ್ತು. ಕ್ರಮೇಣ ಖಾಸಗಿ ವಿಮಾನಗಳು ಹಾರಾಡಲಾರಂಭಿಸಿದ್ದರಿಂದ, ರಾಜಕಾರಣಿಗಳು ತಡವಾಗಿ ಆರಂಭಿಸಿದರೆ, ಅದು ಸುದ್ದಿಯಾಗಲಾರಂಭಿಸಿತು. ಕೇರಳ ಮುಖ್ಯಮಂತ್ರಿಯಾಗಿದ್ದ ಕರುಣಾಕರನ್ ಅವರು ಒಮ್ಮೆ ಒಂದು ಗಂಟೆ ಐದು ನಿಮಿಷ ತಡವಾಗಿ ಆಗಮಿಸಿದ್ದು ದೊಡ್ಡ ಸುದ್ದಿಯಾಗಿತ್ತು. ದೇಶದ ಒಂದಿಲ್ಲೊಂದು ಕಡೆ ಸಚಿವರ, ರಾಜಕಾರಣಿಗಳ ಈ ನಡೆ ಟೀಕೆಗೆ ಗುರಿಯಾಗುತ್ತಿತ್ತು. ಈಗಂತೂ ಯಾವ ಏರ್‌ಲೈನ್ ಸಂಸ್ಥೆಯೂ ಯಾರಿಗೂ ಕಾಯುವುದಿಲ್ಲ. ಈ ದಿನಗಳಲ್ಲಿ ತೀರಾ ಕಾಯಲೇಬೇಕಾದ ಸಂದರ್ಭದಲ್ಲಿ, ತಾಂತ್ರಿಕ ಕಾರಣ ಕೊಟ್ಟು ವಿಮಾನ ನಿಲ್ಲಿಸುವುದುಂಟು. ಆದರೆ ಅಂಥ ಸಂದರ್ಭದಲ್ಲಿ ಏರ್‌ಲೈನ್ ಸಂಸ್ಥೆ ಪ್ರಯಾಣಿಕರ ಅವಕೃಪೆಗೆ ಗುರಿಯಾಗುತ್ತದೆ. ಪ್ರಯಾಣಿಕರು ಅದನ್ನೇ ಸಾಮಾಜಿಕ ಜಾಲತಾಣಗಳಲ್ಲಿ ಬರೆದು ಏರ್‌ಲೈನ್ ಸಂಸ್ಥೆ ಮರ್ಯಾದೆ ಕಳೆಯುತ್ತಾರೆ. ಕೆಲವು ರಾಜಕಾರಣಿಗಳಿಗೆ ತಡವಾಗಿ ಆಗಮಿಸುವುದು ಪ್ರತಿಷ್ಠೆ ಸಂಕೇತ. ಜನ ತಮಗಾಗಿ ಕಾಯಲಿ ಎಂಬ ದರ್ಪದ ಭಾವನೆ. ಇನ್ನು ಕೆಲವರಿಗೆ ಜನರನ್ನು ಅಟೆಂಡ್ ಮಾಡಿಬರುವ ಹೊತ್ತಿಗೆ ತಡವಾಗುತ್ತದೆ. ಇದ್ಯಾವುದೂ ತಡವಾಗಿ ಆಗಮಿಸುವುದಕ್ಕೆ ಸಮರ್ಥನೆ ಅಲ್ಲವೇ ಅಲ್ಲ. ಅಂತಾರಾಷ್ಟ್ರೀಯ ಪ್ರಯಾಣ ಮಾಡುವವರು ವಿಮಾನ ನಿಲ್ದಾಣಕ್ಕೆ ಕನಿಷ್ಠ ಮೂರು ಗಂಟೆ ಮುಂಚಿತವಾಗಿ, ಡೊಮೆಸ್ಟಿಕ್ ಪ್ರಯಾಣಿಕರು ಒಂದೂವರೆ ಮುಂಚಿತವಾಗಿ ಬರಬೇಕಾದುದು ಸಾಮಾನ್ಯ ನಿಯಮ. ಇದರಿಂದ ಕೊನೇಕ್ಷಣದ ಗೊಂದಲ, ತಾಪತ್ರಯವನ್ನು ನಿವಾರಿಸಬಹುದು. ನನಗೆ ತಿಳಿದಂತೆ, ಈ ವಿಷಯದಲ್ಲಿ ಮಾಜಿ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಭಲೇ ಕಟ್ಟುನಿಟ್ಟಿನ ಮನುಷ್ಯ. ಸುಮಾರು 28 ವರ್ಷಗಳ ಹಿಂದಿನ ಘಟನೆ. ಅವರು ಹುಬ್ಬಳ್ಳಿಯಿಂದ ಬೆಂಗಳೂರಿಗೆ ಕಿತ್ತೂರು ಎಕ್ಸ್ ಪ್ರೆಸ್ ರೈಲಿನಲ್ಲಿ ರಾತ್ರಿ ಹತ್ತು ಗಂಟೆಗೆ ಪ್ರಯಾಣಿಸಬೇಕಿತ್ತು. ಆಗ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದರು ಮತ್ತು ಕೇಂದ್ರದಲ್ಲಿ ಅವರ ಪಕ್ಷ ಅಧಿಕಾರದಲ್ಲಿತ್ತು. ಸಹಜವಾಗಿ ಅಧಿಕಾರಿಗಳು ಅವರ ಸೇವೆಗೆ ಕಾಯುತ್ತಿದ್ದರು. ಅವರು ನಿಲ್ದಾಣಕ್ಕೆ ಒಂಬತ್ತು ಗಂಟೆ ಐವತ್ತೈದು ನಿಮಿಷಕ್ಕೆ ಹೋಗಿದ್ದರೂ ಸಾಕಾಗಿತ್ತು. ಆದರೆ ನಾಯ್ಡು ಅವರು ಒಂದೂಕಾಲು ಗಂಟೆ ಮುಂಚಿತವಾಗಿ, ರೈಲು ನಿಲ್ದಾಣದಲ್ಲಿ ಕುಳಿತಿದ್ದರು! ಅನಂತರ ಗೊತ್ತಾಗಿದ್ದೇನೆಂದರೆ, ಅವರು ಎಲ್ಲಿಗೇ ಹೊರಟರೂ, ಕನಿಷ್ಠ ಒಂದು ಗಂಟೆ ಮುಂಚಿತವಾಗಿ ವಿಮಾನ ನಿಲ್ದಾಣ ಅಥವಾ ರೈಲು ನಿಲ್ದಾಣದಲ್ಲಿರುತ್ತಾರೆ. ಮನೆಯಲ್ಲೋ, ಬೇರೆಲ್ಲೋ ಮಾಡುವ ಕೆಲಸವನ್ನು ಕಾಯುವ ಸಂದರ್ಭದಲ್ಲಿ ಮಾಡುತ್ತಾರೆ. ಈ ವಿಷಯದಲ್ಲಿ ನಾನು ವೆಂಕಯ್ಯ ನಾಯ್ಡು ಬೆಂಬಲಿಗ. ಮೊನ್ನೆ ದುಬೈಯಿಂದ ಈಜಿಪ್ತ ರಾಜಧಾನಿ ಕೈರೋಗೆ ಪ್ರಯಾಣ ಮಾಡುವಾಗ, ಮೂರು ಗಂಟೆ ಮುಂಚಿತವಾಗಿ ಆಗಮಿಸಿದ್ದೆ. ಎಲ್ಲ ಕೆಲಸ ಮುಗಿಸಿ, ಲೌಂಜ್‌ಗೆ ಬಂದಾಗ ಇನ್ನೂ ಎರಡೂ ಮುಕ್ಕಾಲು ಗಂಟೆ ಸಮಯವಿತ್ತು. ವಿಮಾನ ನಿಲ್ದಾಣದಲ್ಲಿ ಖರೀದಿಸಿದ ಪುಸ್ತಕವಿತ್ತು. ಒಂದು ಮೂಲೆ ಹಿಡಿದು ಪುಸ್ತಕದೊಳಗೆ ಜಾರಿದೆ. ಬೋರ್ಡಿಂಗ್ ಅನೌನ್ಸ್ ಆಗುವುದರೊಳಗೆ ಪುಸ್ತಕ ಮುಗಿದಿತ್ತು. ಸಾರ್ಥಕವಾಗಿ ಸಮಯ ಕಳೆದ ಅನುಭವ ನನ್ನದಾಗಿತ್ತು. ಇದು ಮುಂಚಿತವಾಗಿ ವಿಮಾನ ನಿಲ್ದಾಣಕ್ಕೆ

ಯಾವುದಿದು ಕಪಾಲ ಸಾಮುದ್ರಿಕ?!

ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ

vveditoped@gmail.com

ಕಪಾಲ ಸಾಮುದ್ರಿಕ! ಹೆಸರು ಕೇಳಿದರೆ ಆಶ್ಚರ್ಯವಾಗುತ್ತದೆ. ಆದರೆ ಇದು ಹೊಸದಲ್ಲ, ಸುಮಾರು ನಾಲ್ಕು ಶತಮಾನಗಳಷ್ಟು ಹಳೆಯದು. ಮನುಷ್ಯನ ಜ್ಞಾನವಿಕಾಸ ಪಥದಲ್ಲಿ ಹುಸಿ ವಿಜ್ಞಾನ ಮತ್ತು ನೈಜ ವಿಜ್ಞಾನಗಳು ಜತೆಜತೆಯಾಗಿ ಬೆಳೆದು ಬಂದಿವೆ. ಜ್ಯೋತಿಷ, ಹಸ್ತ ಸಾಮುದ್ರಿಕಗಳು ಹುಸಿ ವಿಜ್ಞಾನಗಳಾದರೂ ಸಹ ಇಂದಿಗೂ ಅಸ್ತಿತ್ವದಲ್ಲಿವೆ. ಆದರೆ ಕಪಾಲ ಸಾಮುದ್ರಿಕವು ಹುಸಿ ವಿಜ್ಞಾನವೆಂದು ಸಂಪೂರ್ಣವಾಗಿ ನಿರೂಪಿತವಾಗಿದೆ. ಆದರೂ ಅದು ಹುಸಿ ವಿಜ್ಞಾನ ಮತ್ತು ನೈಜ ವಿಜ್ಞಾನಗಳ ಕೊಂಡಿಯಾಗಿ ಕೆಲಸವನ್ನು ಮಾಡಿದ ಕಾರಣದಿಂದ, ತನ್ನ ಐತಿಹಾಸಿಕ ಮಹತ್ವವನ್ನು ಉಳಿಸಿಕೊಂಡಿದೆ.

ಕಪಾಲ ಸಾಮುದ್ರಿಕ, ಫ್ರೇನಾಲಜಿ, ಎರಡು ಗ್ರೀಕ್ ಶಬ್ದಗಳಿಂದ ರೂಪುಗೊಂಡಿದೆ. ಫ್ರೇನ್ ಎಂದರೆ ಮನಸ್ಸು ಅಥವಾ ಮೈಂಡ್ ಎಂದರ್ಥ. ಲೋಗೋಸ್ ಎಂದರೆ ಜ್ಞಾನ. ಹಸ್ತ ಸಾಮುದ್ರಿಕದಲ್ಲಿ ಒಬ್ಬ ವ್ಯಕ್ತಿಯ ಅಂಗೈ ರೇಖೆಗಳನ್ನು ಅಧ್ಯಯನ ಮಾಡಿ ಅವನ ಭೂತ, ವರ್ತಮಾನ ಹಾಗೂ ಭವಿಷ್ಯಗಳನ್ನು ಹೇಗೆ ಹೇಳುತ್ತಾರೋ, ಹಾಗೆಯೇ ಒಬ್ಬ ಮನುಷ್ಯನ ಕಪಾಲದ ಬಾಹ್ಯಾ ಲಕ್ಷಣಗಳಲ್ಲಿ ಅಧ್ಯಯನ ಮಾಡಿ, ಆ ವ್ಯಕ್ತಿಯ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡುವ ಜ್ಞಾನ ಶಾಖೆಯೇ ಕಪಾಲ ಸಾಮುದ್ರಿಕ.

ರೋಮ್ ಸಾಮ್ರಾಜ್ಯದ ಪತನದ ನಂತರ ಯೂರೋಪಿನಲ್ಲಿ ಕಗ್ಗತ್ತಲ ಯುಗವು ಆರಂಭವಾಯಿತು. ಸ್ವಿಸ್ ದೇಶದ ಪಾದ್ರಿ ಜೊಹಾನ್ ಕ್ಯಾಸ್ಪರ್ ಲೇವೇಟರ್ (1741-1801) ಮುಖ ಸಾಮುದ್ರಿಕ (ಫ್ಸಿಯಾಗ್ನಮಿ) ಎಂಬ ಹೊಸ ವಿಜ್ಞಾನವನ್ನು ಆರಂಭಿಸಿ ಅದನ್ನು ಜನಪ್ರಿಯಗೊಳಿಸಿದ. ಒಬ್ಬ ವ್ಯಕ್ತಿಯ ಮುಖ ಮತ್ತು ಶರೀರದ ಲಕ್ಷಣಗಳನ್ನು ಅನುಸರಿಸಿ ಆತನ ಸಮಗ್ರ ವ್ಯಕ್ತಿತ್ವವನ್ನು ಹೇಳಲು ಸಾಧ್ಯ ಎನ್ನುವುದೇ ಮುಖಸಾಮುದ್ರಿಕದ ತಿರುಳು. ಇದು ಜನಸಾಮಾನ್ಯರಲ್ಲಿ ಮುಖ ವಾಚನ ಅಥವಾ ಫೇಶಿಯಲ್ ರೀಡಿಂಗ್ ಎಂದು ಜನಪ್ರಿಯವಾಯಿತು.

ಮುಖ ಸಾಮುದ್ರಿಕದ ಬಗ್ಗೆ ಪರ-ವಿರೋಧ ಚರ್ಚೆಗಳು ನಡೆಯುತ್ತಿರುವ ವೇಳೆ ಜರ್ಮನ್ ನರಾಂಗರಚನ ವಿಜ್ಞಾನಿ, ಫ್ರಾಂಜ್ ಜೋಸೆಫ್ ಗಾಲ್ (1758-1828) ಕಪಾಲ ಸಾಮುದ್ರಿಕ ಎಂಬ ಹೊಸ ಪರಿಕಲ್ಪನೆಯನ್ನು ಮಂಡಿಸಿದ. ಗಾಲ್ ಜರ್ಮನಿಯ ಟೀಫೆನ್‌ಬ್ರಾನ್ ಎಂಬ ಹಳ್ಳಿಯಲ್ಲಿ ಹುಟ್ಟಿದ. 12 ಮಕ್ಕಳ ತುಂಬು ಕುಟುಂಬದಲ್ಲಿ ಎರಡನೆಯವನಾಗಿ ಹುಟ್ಟಿದ ಗಾಲ್, ತನ್ನ ಬಾಲ್ಯದಲ್ಲಿಯೇ ತನ್ನ ಸೋದರರ ಬಗ್ಗೆ ಕುತೂಹಲವನ್ನು ತಳೆದ. ಒಬ್ಬ ವ್ಯಕ್ತಿಯ ಬುದ್ಧಿವಂತಿಕೆಯು ಆತನ ದೈಹಿಕ ಲಕ್ಷಣಗಳಲ್ಲಿ ವ್ಯಕ್ತವಾಗಿರುತ್ತದೆ ಎಂದು ನಂಬಿದ್ದ ಗಾಲ್, ತನ್ನ ಸೋದರರು ಹಾಗೂ ತನ್ನ ಸಹಪಾಠಿಗಳ ದೈಹಿಕ ಲಕ್ಷಣಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಲಾರಂಭಿಸಿದ. ಅವನ ಸಹಪಾಠಿಯೊಬ್ಬನ ಅಸಾಧಾರಣ ವಾಕ್ಪಟುತ್ವಕ್ಕೆ ಈ ಭಿನ್ನ ಸ್ವರೂಪದ ಕಪಾಲವೇ ಕಾರಣ ಎನ್ನುವ ತೀರ್ಮಾನಕ್ಕೆ ಬಂದ. ಹಾಗೆಯೇ ಅಪಾರ ನೆನಪಿನ ಶಕ್ತಿಯಿದ್ದ ತನ್ನ ಗೆಳೆಯನ ಮುಖ-ತಲೆಯನ್ನು ಅಧ್ಯಯನ ಮಾಡಿದ. ನೆನಪಿನ ಶಕ್ತಿಯೂ ಯಾವ ರೂಪದಲ್ಲಿ ಅಭಿವ್ಯಕ್ತವಾಗಿದೆ ಎಂದು ಹುಡುಕಲಾರಂಭಿಸಿದ. ಪಾದ್ರಿಯಾಗಬೇಕೆಂದುಕೊಂಡಿದ್ದವನು ಸ್ಟ್ರಾಸ್‌ಬರ್ಗ್ ವಿಶ್ವವಿದ್ಯಾನಿಲಯವನ್ನು ಸೇರಿ ವೈದ್ಯಕೀಯ ಪದವಿಯನ್ನು ಪಡೆದ. ಒಬ್ಬ ವ್ಯಕ್ತಿಯ ಮುಖ, ಕಪಾಲ ಲಕ್ಷಣಗಳು ವ್ಯಕ್ತಿಯ ಬುದ್ಧಿವಂತಿಕೆ ಹಾಗೂ ವ್ಯಕ್ತಿತ್ವವನ್ನು ಸೂಚಿಸುತ್ತದೆ ಎಂದು ನಂಬಿದ್ದ ಗಾಲ್, 300 ಕಪಾಲಗಳನ್ನು ಅಧ್ಯಯನ ಮಾಡಿದ. ಅವಯವ ವಿಜ್ಞಾನ (ಆರ್ಗನಾಲಜಿ) ಮತ್ತು ಕಪಾಲಪರೀಕ್ಷೆ (ಕ್ರೆನಿಯೋಸ್ಕೋಪಿ) ಎಂಬ ಎರಡು ವಿಜ್ಞಾನ ಶಾಖೆಗಳನ್ನು ಹುಟ್ಟು ಹಾಕಿದ. ಮುಂದೆ ಈ ಎರಡೂ ಶಾಖೆಗಳು ಸೇರಿಕೊಂಡು ಕಪಾಲ ಸಾಮುದ್ರಿಕಕ್ಕೆ ಎಡೆ ಮಾಡಿಕೊಟ್ಟವು.

1819ರಲ್ಲಿ ನರಮಂಡದ, ವಿಶೇಷವಾಗಿ ಮಿದುಳಿನ ಸಮಗ್ರ ಅಂಗರಚನೆ ಮತ್ತು ಅಂಗಕ್ರಿಯಾ ವಿಜ್ಞಾನ; ಮನುಷ್ಯರ ಹಾಗೂ ಪ್ರಾಣಿಗಳ ಶಿರ ಲಕ್ಷಣಗಳ ಅಧ್ಯಯನದಿಂದ ಅವರ ಹಲವು ಬೌದ್ಧಿಕ ಸಾಮರ್ಥ್ಯಗಳ ಹಾಗೂ ನೈತಿಕ ಗುಣ ಲಕ್ಷಣಗಳನ್ನು ತಿಳಿಯುವಿಕೆ ಎಂಬ ಉದ್ದ ಹೆಸರಿನ ಪುಸ್ತಕವನ್ನು ಬರೆದ. ಈ ಪುಸ್ತಕದಲ್ಲಿ ಆರಂಭದಲ್ಲಿ ತನ್ನ ಕಪಾಲ ಸಾಮುದ್ರಿಕದ ಹಿಂದಿರುವ ಬಹಳ ಮುಖ್ಯವಾದ ಪರಿಕಲ್ಪನೆಗಳನ್ನು ಪಟ್ಟಿ ಮಾಡಿದ.

ಮನಸ್ಸಿನ ಅಂಗ ಮಿದುಳು

ಮಿದುಳು ಎನ್ನುವುದು ಒಂದು ಸಮಗ್ರ ರಚನೆಯಲ್ಲ; ಬದಲಿಗೆ ಹಲವು ಭಿನ್ನ ಭಿನ್ನ ಕೆಲಸಗಳನ್ನು ಮಾಡುವ ವಿವಿಧ ಅಂಗಗಳ / ಅವಯವಗಳ (ಬ್ರೇನ್ ಆರ್ಗನ್ಸ್) ಸಮಷ್ಟಿ ರಚನೆಯಾಗಿದೆ. ಈ ವಿವಿಧ ಅಂಗಗಳು, ಮಿದುಳಿನ ನಿರ್ದಿಷ್ಟ ಭೌಗೋಳಿಕ ಸ್ಥಾನಗಳಲ್ಲಿರುತ್ತವೆ. ಮಿದುಳಿನ ವಿವಿಧ ಅಂಗಗಳ ಗುಣಲಕ್ಷಣಗಳು ಏಕರೂಪವಾಗಿರಬಹುದು; ಆದರೆ ಅವುಗಳ ಸಾಪೇಕ್ಷ ಗಾತ್ರವು ಆ ಅಂಗದ ಶಕ್ತಿ ಅಥವ ಪ್ರಬಲತೆಯನ್ನು ಸೂಚಿಸುತ್ತದೆ.

ಕಪಾಲವು ಮಗುವಿನ ಮಿದುಳಿನ ಮೇಲೆ ಬೆಳೆಯುವ ಕಾರಣ, ಕಪಾಲದ ಭೌತಿಕ ಲಕ್ಷಣಗಳನ್ನು ಅಧ್ಯಯನ ಮಾಡುವುದರ ಮೂಲಕ, ಮಿದುಳಿನ ರಚನೆಯಲ್ಲಿ ಪಾಲುಗೊಂಡಿರುವ ಮಿದುಳಿನ ಅಂಗಗಳ ಬೌದ್ಧಿಕ ಲಕ್ಷಣಗಳನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ.

ಫ್ರಾಂಜ್ ಜೋಸೆಫ್ ಗಾಲ್, ಮನುಷ್ಯನ ಮಿದುಳು ವಾಸ್ತವದಲ್ಲಿ 27 ಅಂಗಗಳ ಸಮಷ್ಟಿ ರಚನೆಯೆಂದ. ಈ ಒಂದೊಂದು ಅಂಗವು ಮನುಷ್ಯನ ಒಂದೊಂದು ಬೌದ್ಧಿಕ ಆಯಾಮವನ್ನು ಪ್ರತಿನಿಧಿಸುತ್ತದೆ ಎಂದ. ಅದು ಕಾಮದಿಂದ ಹಿಡಿದು, ಧಾರ್ಮಿಕ ಮನೋಭಾವದಿಂದ ಹಿಡಿದು, ಬೌದ್ಧಿಕ ಪ್ರತಿಭೆಯಿಂದ ಹಿಡಿದು, ಕೊಲೆ-ಸುಲಿಗೆ-ದರೋಡೆಕೋರ ಲಕ್ಷಣಗಳನ್ನೆಲ್ಲ ನಿಯಂತ್ರಿಸುತ್ತದೆ ಎಂದ. ಈ 27 ಬೌದ್ಧಿಕ ಆಯಾಮಗಳಲ್ಲಿ, 19 ಬೌದ್ಧಿಕ ಆಯಾಮಗಳು ಪ್ರಾಣಿಗಳಲ್ಲಿಯೂ ಇರುತ್ತವೆ ಎಂದ. ಈ 27 ಅಂಗಗಳ ಬಾಹ್ಯಾಲಕ್ಷಣಗಳು ಕಪಾಲದ ರಚನೆಯಲ್ಲಿ ವ್ಯಕ್ತವಾಗಿರುತ್ತವೆ ಎಂದು ನಂಬಿದ್ದ ಗಾಲ್, ವ್ಯಕ್ತಿಯ ಕಪಾಲವನ್ನು ವ್ಯಾಸಮಾಪಕದಿಂದ (ಕ್ಯಾಲಿಪರ್ಸ್) ಅಳೆದು, ಅವನ್ನು ಅರ್ಥೈಸುವ ಕಪಾಲ ಪರೀಕ್ಷೆಯನ್ನು ಕ್ರಮಬದ್ಧಗೊಳಿಸಿದ. ಕಪಾಲದ ಮೇಲ್ಮೈ ಲಕ್ಷಣಗಳನ್ನು ಸೂಕ್ಷ್ಮವಾಗಿ ಗಮನಿಸಿದ. ಅಂಗೈಯಿಂದ ತಡವಿ ತಡವಿ ಅವುಗಳ ರಚನೆಯಲ್ಲಿರಬಹುದಾದ ಸೂಕ್ಷ್ಮ ಭಿನ್ನತೆಗಳನ್ನು ಲೆಕ್ಕಹಾಕಿದ. ಈ 27 ಮಿದುಳಿನ ಅಂಗಗಳಿಗೆ ಹೆಸರನ್ನು ನೀಡಿದ. ಅವುಗಳನ್ನು ನಿಖರವಾಗಿ ಗುರುತಿಸಲು ಸಂಖ್ಯೆಯನ್ನೂ ನೀಡಿದ. ಒಂದು ಕಪಾಲ ನಕ್ಷೆಯನ್ನು ಸಿದ್ಧಪಡಿಸಿದ. ಈ ಬಗ್ಗೆ ಯೂರೋಪಿನಾದ್ಯಂತ ಭಾಷಣಗಳನ್ನು ನೀಡಿದ.

ಗಾಲ್ ಯೂರೋಪಿನಾದ್ಯಂತ ಅಸಂಖ್ಯ ಅಭಿಮಾನಿಗಳನ್ನು ಗಳಿಸಿದ. ಅವರಲ್ಲಿ ಜರ್ಮನಿಯ ವೈದ್ಯ ಜೊಹಾನ್ ಗ್ಯಾಸ್ಪರ್ ಸ್ಪುರ್ಝೀಮ್ (1776-1832) ಮುಖ್ಯನಾಗಿದ್ದ. ಗಾಲ್ ಸಹಾಯಕನಾಗಿ ಅವನೊಡನೆ ಎಲ್ಲ ಕಡೆ ಹೋದ ಸ್ಪುರ್ಝೀಮ್, ಅವಯವ ವಿಜ್ಞಾನ ಮತ್ತು ಕಪಾಲ ಪರೀಕ್ಷೆಗಳೆರಡನ್ನೂ ಸಮನ್ವಯಗೊಳಿಸಿ ಕಪಾಲ ಸಾಮುದ್ರಿಕ (ಫ್ರೇನಾಲಜಿ) ಎಂಬ ಹೆಸರನ್ನು ಜನಪ್ರಿಯಗೊಳಿಸಿದ. ಮುಂದಿನ ದಿನಗಳಲ್ಲಿ ಗಾಲ್‌ನಿಂದ ಪ್ರತ್ಯೇಕವಾಗಿ ತಾನೇ ಕಪಾಲ ಸಾಮುದ್ರಿಕವನ್ನು ಜನಪ್ರಿಯಗೊಳಿಸಲಾರಂಭಿಸಿದ. ಗಾಲ್ ನಮೂದಿಸಿದ 27 ಮಿದುಳ ಅವಯವಗಳ ಸಂಖ್ಯೆಯನ್ನು 32ಕ್ಕೆ ಹೆಚ್ಚಿಸಿದ. ತನ್ನದೇ ಆದ ಕಪಾಲ ನಕ್ಷೆಯನ್ನು ಬಿಡುಗಡೆ ಮಾಡಿದ. ಜಾರ್ಜ್ ಕೂಂಬೆ (1788-1858) ಎಂಬ ಸ್ಕಾಟಿಷ್ ವಕೀಲನು ಕಪಾಲ ಸಾಮುದ್ರಿಕವನ್ನು ಜನಪ್ರಿಯಗೊಳಿಸಿ, ಎಡಿನ್‌ಬರೋ ಫ್ರೇನಾಲಜಿಕಲ್ ಸೊಸೈಟಿಯನ್ನು 1820ರಲ್ಲಿ ಸ್ಥಾಪಿಸಿದ. ಜೊತೆಗೆ ದಿ ಕಾನ್‌ಸ್ಟಿಟ್ಯೂಶನ್ ಆಫ್ ಮ್ಯಾನ್ ಎಂಬ ಪುಸ್ತಕವನ್ನೂ ಬರೆದ. ಅದರ 3 ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾದವು. ಕೂಂಬೆ, ಮಿದುಳ ಅವಯವಗಳ ಸಂಖ್ಯೆಯನ್ನು 35 ಕ್ಕೆ ಏರಿಸಿದ. ಆನಂತರ ಬಂದ ಎಚ್.ಲುಂಡಿ ಈ ಸಂಖ್ಯೆಯನ್ನು 39ಕ್ಕೆ ಏರಿಸಿದ. ಹೀಗೆ ಗಾಲ್ ಆರಂಭಿಸಿದ ಕಪಾಲ ಸಾಮುದ್ರಿಕವನ್ನು ಅಸಂಖ್ಯ ಜನರು ತಮಗೆ ಸರಿಕಂಡಂತೆ, ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿ, ಜನಪ್ರಿಯಗೊಳಿಸಿದರು.

ಕಪಾಲ ಸಾಮುದ್ರಿಕವು ಎಷ್ಟು ಜನಪ್ರಿಯವಾಯಿತೋ ಅಷ್ಟೇ ವಾದ-ವಿವಾದಗಳಿಗೆ ಎಡೆಕೊಟ್ಟಿತು. ಕಪಾಲ ಸಾಮುದ್ರಿಕವು ವರ್ಣಭೇದ ನೀತಿಗೆ (ರೇಸಿಸಂ) ಇಂಬು ಕೊಟ್ಟಿತು. ಹೆಂಗಸರ ಮಿದುಳು ಪೂರ್ಣವಾಗಿ ಬೆಳೆದಿರುವುದಿಲ್ಲ ಎಂದು ಲಿಂಗ ತಾರತಮ್ಯಕ್ಕೆ ಎಡೆ ಮಾಡಿಕೊಟ್ಟಿತು. ಮಕ್ಕಳ ಜನ್ಮದತ್ತ ಪ್ರತಿಭೆಗೆ ಆದ್ಯತೆಯನ್ನು ದೊರೆಯುತ್ತಿಲ್ಲ, ಅರ್ಹ ಮಕ್ಕಳು ವಂಚಿತರಾಗುತ್ತಿದ್ದಾರೆ ಎಂಬ ಹುಯಿಲೆದ್ದಿತು. ಕಪಾಲ ಸಾಮುದ್ರಿಕವನ್ನು ಅಧ್ಯಯನ ಮಾಡುವುದರ ಮೂಲಕ ಯಾರು ಕಳ್ಳರು, ಯಾರು ಸುಳ್ಳರು, ಯಾರು ಕೊಲೆಗಡುಕರು ಎಂಬುದನ್ನು ಗುರುತಿಸಬಹುದೆಂಬ ವಿಚಾರವು, ಅಪರಾಧ ವಿಜ್ಞಾನದ (ಕ್ರಿಮಿನಾಲಜಿ) ಮೇಲೆ ಪ್ರಭಾವವನ್ನು ಬೀರಿ, ಮುಗ್ಧರಿಗೆ ಶಿಕ್ಷೆಯಾಗುವ ಭಯವು ತೀವ್ರವಾಯಿತು. ಗಾಲ್ ಸಿದ್ಧಾಂತದ ಮೇಲೆ ಇಟಾಲಿಯನ್ ಮನೋವೈದ್ಯ ಬಿಯಾಜಿಯೊ ಮಿರಾಗ್ಲಿಯ (1823-1885) ಮನೋರೋಗಗಳ ನೂತನ ವರ್ಗೀಕರಣವನ್ನು ಮಾಡಿದ. ಕಪಾಲ ಸಾಮುದ್ರಿಕವು ಮನೋವಿಜ್ಞಾನದ ಆಳ-ಹರಹುಗಳನ್ನು ನಿರ್ಧರಿಸುತ್ತದೆ ಎಂಬ ಕಲ್ಪನೆಯು ಸಾಹಿತಿಗಳನ್ನೂ ಬಿಡಲಿಲ್ಲ. ಈ ಹಿನ್ನೆಲೆಯಲ್ಲಿ ಅನೇಕ ಸಾಹಿತ್ಯ ಕೃತಿಗಳು ರಚನೆಯಾಗಿ ಹುಸಿ ವಿಜ್ಞಾನವನ್ನು ಜನಪ್ರಿಯಗೊಳಿಸಿದವು.

ಕಪಾಲ ಸಾಮುದ್ರಿಕವು ಅವೈಜ್ಞಾನಿಕ ಎನ್ನುವುದಕ್ಕೆ ಅಗತ್ಯ ಪುರಾವೆಯನ್ನು ಇಬ್ಬರು ವೈದ್ಯ ವಿಜ್ಞಾನಿಗಳು ಒದಗಿಸಿದರು. ಮೊದಲನೆಯವರು ಫ್ರೆಂಚ್ ವೈದ್ಯರಾಗಿದ್ದ ಮೇರಿ ಜೀನ್ ಪಿಯರಿ ಫ್ಲೌರೆನ್ಸ್ (1794-1867) ಹಾಗೂ ಎರಡನೆಯವರು ಫ್ರೆಂಚ್ ವೈದ್ಯ ಮತ್ತು ಅಂಗರಚನ ವಿಜ್ಞಾನಿಯಾಗಿದ್ದ ಪಾಲ್ ಬ್ರೋಕ (1824-1880). ಫ್ಲೌರೆನ್ಸ್ ಬಹಳ ಸರಳವಾದ ಪ್ರಯೋಗವನ್ನು ಮಾಡಿದ. ಗಾಲ್ ಅನ್ವಯ ಮನುಷ್ಯರ 27 ಮಿದುಳಿನ ಅವಯವಗಳಲ್ಲಿ, 19 ಅವಯವಗಳು ಪ್ರಾಣಿಗಳಲ್ಲಿಯೂ ಇವೆಯಲ್ಲವೆ! ಅವನು ಪಾರಿವಾಳ ಮತ್ತು ಮೊಲಗಳನ್ನು ತೆಗೆದುಕೊಂಡ. ಕಪಾಲ ನಕ್ಷೆಯ ಪ್ರಕಾರ, ಪಾರಿವಾಳ ಮತ್ತು ಮೊಲದ ಮಿದುಳಿನ ನಿರ್ದಿಷ್ಟ ಭಾಗವನ್ನು ಸುಟ್ಟುಹಾಕಿದ! ಆಗ ಕಪಾಲ ನಕ್ಷೆಯ ಅನ್ವಯ, ಆ ಪಾರಿವಾಳದ ನಿರ್ದಿಷ್ಟ ಕಾರ್ಯವು ನಷ್ಟವಾಗಬೇಕಾಗಿತ್ತು. ಆದರೆ ಹಾಗೆ ಆಗಲಿಲ್ಲ! ಮತ್ಯಾವುದೋ ಕಾರ್ಯಸಾಮರ್ಥ್ಯವು ನಷ್ಟವಾಯಿತು. ಇಂತಹ ಹಲವು ಪ್ರಯೋಗಗಳನ್ನು ಮಾಡಿ ಕಪಾಲ ಸಾಮುದ್ರಿಕಕ್ಕೆ ಹುರುಳಿಲ್ಲವೆಂದ. ಪಾಲ್ ಬ್ರೋಕ, ಮಾತಿನ ಉತ್ಪಾದನೆಗೆ ಕಾರಣವಾಗುವ ಭಾಗ, ಮಿದುಳಿನ ಎಡ ಅರೆಗೋಳದಲ್ಲಿ ನಮ್ಮ ಮಾತಿನ ಸಾಮರ್ಥ್ಯವನ್ನು ನಿರ್ಧರಿಸುವ ಪ್ರದೇಶವಿದೆ ಎನ್ನುವುದನ್ನು ನಿರೂಪಿಸಿದ. ಇದುವೇ ಬ್ರೋಕಾ ಕ್ಷೇತ್ರ ಎಂದು ಪ್ರಸಿದ್ಧವಾಗಿದೆ.

ಫ್ಲೌರೆನ್ಸ್ ಮತ್ತು ಬ್ರೋಕಾ ಅವರ ಪ್ರಯೋಗಗಳಿಂದ ಮಿದುಳಿನ 27 ಅವಯವಗಳು ಇಲ್ಲ. ಇಡೀ ಮಿದುಳು ಒಂದು ಅಂಗವಾಗಿ ಕಾರ್ಯವನ್ನು ನಿರ್ವಹಿಸುತ್ತದೆ. ಒಬ್ಬ ವ್ಯಕ್ತಿಯ ಒಂದೊಂದು ಕೆಲಸವನ್ನು ಮಿದುಳಿನ ಒಂದೊಂದು ಭಾಗವು ನಿರ್ವಹಿಸುತ್ತದೆ. ಬ್ರೋಕಾ ಮಾತಿನ ಕ್ಷೇತ್ರವನ್ನು ಕಂಡುಹಿಡಿದ. ಫ್ಲೌರೆನ್ಸ್ ದೇಹದ ಸಮತೋಲನೆ, ಉಸಿರಾಟ, ರಕ್ತಪರಿಚಲನೆಯ ಕೇಂದ್ರಗಳನ್ನು ಪತ್ತೆ ಹಚ್ಚಿದ. ಹೀಗೆ ಹಲವು ವಿಜ್ಞಾನಿಗಳು ಹಲವು ಕ್ಷೇತ್ರಗಳನ್ನು ಪತ್ತೆಹಚ್ಚಿದರು.

ಜರ್ಮನ್ ನರಮನೋವೈದ್ಯ ಕಾರ್ಬಿನಿಯನ್ ಬ್ರಾಡ್ಮನ್ (1918-1868) ಮಿದುಳಿನಲ್ಲಿ 52 ಕ್ಷೇತ್ರಗಳನ್ನು ಗುರುತಿಸಿದ. ಇವು ತಮ್ಮದೇ ಆದ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಆ ಕ್ಷೇತ್ರಗಳು ಇಂದು ಬ್ರಾಡ್ಮನ್ ಕ್ಷೇತ್ರಗಳೆಂದು ಪ್ರಸಿದ್ಧವಾಗಿವೆ. ಅಧ್ಯಯನಗಳು ಮುಂದುವರೆಯುತ್ತಿವೆ.

ಚುನಾವಣೆ ಸಮಯದಲ್ಲಿ ಏನಿದು ಕಚ್ಚತೀವು ಪ್ರಮಾದ?

ಪ್ರಚಲಿತ

ವಿನಾಯಕ ವೆಂ. ಭಟ್ಟ ಅಂಬ್ಲಿಹೊಂಡಾ

vveditoped@gmail.com

ಇಡೀ ದೇಶದಲ್ಲಿ ಕಳೆದ ಕೆಲ ದಿನಗಳಿಂದ ಭಾರಿ ಸದ್ದು ಮಾಡುತ್ತಿರುವ ವಿಷಯವೆಂದರೆ ಅದು ಕಚ್ಚತೀವು. ಅನೇಕರಿಗೆ ಇದೇನು ಎಂದು ತಿಳಿಯುವ ಮೊದಲೇ, ಕಾಂಗ್ರೆಸ್ ವಿರುದ್ಧ ಇದನ್ನು ಬಹುದೊಡ್ಡ ಅಸ್ತ್ರವನ್ನಾಗಿ ಬಳಸಿಕೊಂಡಿದೆ.

ಅಷ್ಟಕ್ಕೂ ಕಚ್ಚತೀವು ಬಗ್ಗೆ ಗೊತ್ತಿಲ್ಲದವರಿಗೆ ಇದರ ಬಗ್ಗೆ ಹೇಳಬೇಕೆಂದರೆ, 'ಕಚ್ಚತೀವು' ಭಾರತ ಮತ್ತು ಶ್ರೀಲಂಕಾದ ಮಧ್ಯೆಯಿರುವ ಒಂದು ಸಣ್ಣ ನಡುಗಡ್ಡೆ. 285 ಎಕರೆ ವಿಸ್ತಾರದ ಜನವಸತಿ ಇಲ್ಲದ ಈ ದ್ವೀಪ, ಭಾರತ ಮತ್ತು ಶ್ರೀಲಂಕಾದ ರಾಮೇಶ್ವರ ನಡುವಿನ ಪಾಕ್ ಜಲಸಂಧಿಯಲ್ಲಿದೆ. ಇದನ್ನು ಸಾಂಪ್ರದಾಯಿಕವಾಗಿ ಎರಡೂ ದೇಶಗಳ ಮೀನುಗಾರರು ಬಳಸುತ್ತಿದ್ದರು. ಆರಂಭದಲ್ಲಿ ಅದು ಮದ್ರಾಸ್ ಪ್ರೆಸಿಡೆನ್ಸಿಯ ಭಾಗವಾಗಿತ್ತು. ಅದಕ್ಕೂ ಮೊದಲು, ಇದು ರಾಮನಾಥಪುರದ ರಾಮೇಶ್ವರದ ರಾಮನಾಡ್ ಸಾಮ್ರಾಜ್ಯದ ಒಡೆತನದಲ್ಲಿತ್ತು, ಇದು ನಂತರಭಾರತೀಯ ಉಪಖಂಡದ ಬ್ರಿಟಿಷ್ ಆಳ್ವಿಕೆಯಲ್ಲಿಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಬಂದಿತು. 1920 ರ ಹೊತ್ತಿಗೆ, ಶ್ರೀಲಂಕಾವು ಕಚ್ಚತೀವಿಗೆ ತನ್ನ ಹಕ್ಕುಗಳನ್ನು ಮರುಸ್ಥಾಪಿಸಲು ಪ್ರಯತ್ನ ಆರಂಭಿಸಿತು ಮತ್ತು 1921ರಲ್ಲಿ ದ್ವೀಪವು ಶ್ರೀಲಂಕಾದ ಭೂಪ್ರದೇಶದೊಳಗೆ ಹೋಯಿತು.

ದ್ವೀಪದ ಹಳೆಯ ಹೆಸರು, 'ಕಚ್ಚಿ' ಹೊಸ ಹೆಸರು 'ಕಚ್ಚತೀವು'. ಶ್ರೀಲಂಕಾದ ರಾಜನಿಸ್ಸಂಕಮಲ್ಲನು ತನ್ನ ಸಾಮ್ರಾಜ್ಯ ವಿಸ್ತಾರದ ದಂಡಯಾತ್ರೆಯ ಸಮಯದಲ್ಲಿ ಈ ದ್ವೀಪಕ್ಕೆ ಭೇಟಿ ನೀಡಿದ್ದನೆಂದು ಅಲ್ಲಿನ ಶಾಸನವು ಹೇಳುತ್ತದೆ. ಐತಿಹಾಸಿಕವಾದ ವಾಸ್ತವಾಂಶವನ್ನು ಆಧರಿಸಿ 1974ರಲ್ಲಿ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಶ್ರೀಲಂಕಾದ ಸಿರಿಮಾ ಬಂಡಾರು ನಾಯಕೆಯವರ ಜತೆಗೆ ಒಂದು ಒಪ್ಪಂದಕ್ಕೆ ಸಹಿಹಾಕಿದರು. ಭಾರತ ಮತ್ತು ಲಂಕಾ ನಡುವೆ ಸಮುದ್ರದಲ್ಲಿ ಗಡಿಯನ್ನು ನಿರ್ಧರಿಸುವ ಒಪ್ಪಂದವಾಗಿತ್ತು ಅದು. ಶ್ರೀಲಂಕಾ ಮತ್ತು ಭಾರತೀಯ ಸರಕಾರಗಳ ನಡುವೆ ಈ ದ್ವೀಪದ ವಿವಾದವು 1920 ರಿಂದ 1974ರವರೆಗೂ ವಿವಾದಿತ ಪ್ರದೇಶವಾಗೇ ಇತ್ತು. ಆ ವರ್ಷ ಇಂದಿರಾ ಗಾಂಧಿ ಸರಕಾರವು ಶ್ರೀಲಂಕಾದೊಂದಿಗೆ ಉತ್ತಮ ಸಂಬಂಧವನ್ನು ಕಾಪಾಡಿಕೊಳ್ಳಲು ಮತ್ತು ಅಲ್ಲಿನ ಲಕ್ಷಾಂತರ ತಮಿಳರಿಗೆ ಸಹಾಯ ಮಾಡಲು ದ್ವೀಪ ರಾಷ್ಟ್ರದ ಸರಕಾರದೊಂದಿಗೆ ಮಾತುಕತೆ ನಡೆಸಿತು. ಮಾತುಕತೆಗಳ ನಂತರ, ಕಚ್ಚತೀವು ಶ್ರೀಲಂಕಾಕ್ಕೆ ಸೇರಿದೆ ಎಂದು ಭಾರತ ಒಪ್ಪಿಕೊಂಡಿತು. ಪ್ರತಿಯಾಗಿ, ಆರು ಲಕ್ಷ ತಮಿಳರು ಭಾರತಕ್ಕೆ ಬರಲು ಅವಕಾಶವಾಯಿತು.

ಅದಕ್ಕೂ ಮೊದಲು 1961ರಲ್ಲಿ ಈ ವಿಷಯ ಪ್ರಸ್ತಾಪವಾದ ಸಮಯದಲ್ಲಿ ಮಾಜಿ ಪ್ರಧಾನಿ ಜವಾಹರಲಾಲ್ ನೆಹರು ಅವರು ಸಂಸತ್ತಿನಲ್ಲಿ ಈ ವಿಷಯವನ್ನು 'ಅಪ್ರಸ್ತುತ'ವೆಂದು ತಳ್ಳಿಹಾಕಿದರು ಎನ್ನುವ ವಿಷಯ ಇದೀಗ ಬೆಳಕಿಗೆ ಬಂದಿದೆ. ಅಂದು ನೆಹರೂ 'ಈ ದ್ವೀಪದ ಮೇಲಿನ ಹಕ್ಕು ಬಿಟ್ಟುಕೊಡಲು ನಾನು ಯಾವುದೇ ಹಿಂಜರಿಕೆ ತೋರಿಸುವುದಿಲ್ಲ' ಎಂದಿದ್ದರು. ನನಗೆ ಈ ಪುಟ್ಟ ದ್ವೀಪವು ಒಂದು ರೀತಿಯ 'ಇರಿಟೇಶನ್' ಆಗಿದೆ. ಆದ್ದರಿಂದ ಈ ವಿವಾದವನ್ನು ಅನಿರ್ದಿಷ್ಟವಾಗಿ ಮುಂದುವರಿಯುವುದು ಮತ್ತು ಸಂಸತ್ತಿನಲ್ಲಿ ಮತ್ತೆ ಮತ್ತೆ ಪ್ರಸ್ತಾಪವಾಗುವುದು ನನಗೆ ಸುತರಾಂ ಇಷ್ಟವಿಲ್ಲ ಎಂದಿದ್ದರು.

ಇದಾದ ಬಳಿಕ ಜೂನ್ 2011ರಲ್ಲಿ ತಮಿಳುನಾಡು ಮುಖ್ಯಮಂತ್ರಿ ಜೆ. ಜಯಲಲಿತಾ ನೇತೃತ್ವದ ತಮಿಳುನಾಡು ಸರಕಾರವು ಕಚ್ಚತೀವುವನ್ನು ಶ್ರೀಲಂಕಾಕ್ಕೆ ಬಿಟ್ಟುಕೊಡುವ ಕುರಿತು ಭಾರತ ಮತ್ತು ಶ್ರೀಲಂಕಾ ನಡುವಿನ 1974 ರ ಒಪ್ಪಂದಗಳ ಘೋಷಣೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತು. ಬೇರೊಂದು ದೇಶಕ್ಕೆ ಭಾರತೀಯ ಭೂ ಪ್ರದೇಶವನ್ನು ಬಿಟ್ಟುಕೊಡುವುದನ್ನು ಸಂವಿಧಾನದ ತಿದ್ದುಪಡಿಯ ಮೂಲಕ ಸಂಸತ್ತು ಅನುಮೋದಿಸಬೇಕೆಂದು ನ್ಯಾಯಾಲಯವು ತೀರ್ಪು ನೀಡಿತು. ಭಾರತ ಸರಕಾರವು ದ್ವೀಪ ಯಾವತ್ತೂ ಭಾರತದ್ದಾಗಿರಲಿಲ್ಲ, ಆದ್ದರಿಂದ ಸರಕಾರ ಭಾರತಕ್ಕೆ ಸೇರಿದ ಯಾವುದೇ ಪ್ರದೇಶವನ್ನು ಬಿಟ್ಟುಕೊಟ್ಟಿಲ್ಲ ಅಥವಾ ಸಾರ್ವಭೌಮತ್ವವನ್ನು ಬಿಟ್ಟುಕೊಡಲಾಗಿಲ್ಲ, ಈ ಪ್ರದೇಶವು ವಿವಾದದಲ್ಲಿದೆ ಎಂದು ಯಾವತ್ತೂ ಗುರುತಿಸಲಾಗಿರಲಿಲ್ಲ. ಹಾಗಾಗಿ, ಭಾರತ ಯಾವುದೇ ಪ್ರದೇಶವನ್ನು ಬಿಟ್ಟುಕೊಡದ ಕಾರಣ ಒಪ್ಪಂದಗಳಿಗೆ ಸಾಂವಿಧಾನಿಕ ತಿದ್ದುಪಡಿಯ ಅಗತ್ಯವಿಲ್ಲ ಎಂದು ಸರಕಾರ ಫೆಬ್ರವರಿ 2014ರಲ್ಲಿ ಸುಪ್ರೀಂ ಕೋರ್ಟ್‌ಗೆ ಹೇಳಿತ್ತು.



ಆದರೆ ಇದೀಗ ಈ ವಿಷಯವನ್ನು ಮತ್ತೆ ಮುನ್ನಲೆಗೆ ತಂದಿದ್ದು ಅಣ್ಣಾಮಲೈ. ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ ಆರ್‌ಟಿಐಗೆ ಅರ್ಜಿ ಸಲ್ಲಿಸಿ ಉತ್ತರ ಪಡೆದು ಇತಿಹಾಸದಲ್ಲಿ ಹುದುಗಿ ಹೋಗಿದ್ದ ಈ ಪ್ರಮಾದಕ್ಕೆ ಮರುಜೀವ ನೀಡಿದರು ಮತ್ತು ತಮಿಳುನಾಡಿನಲ್ಲಿ ಈ ಕುರಿತು ವಿಸ್ತಾರವಾಗಿ ಪ್ರಚಾರ ಮಾಡಲು ಶುರುವಿಟ್ಟುಕೊಂಡರು. ನಂತರ ಇದಕ್ಕೆ ಪೂರಕವಾಗಿ ಪ್ರಧಾನ ಮಂತ್ರಿಗಳೂ, ವಿದೇಶಾಂಗ ವ್ಯವಹಾರಗಳ ಮಂತ್ರಿಗಳೂ ದನಿಗೂಡಿಸಿದರು. ಈ ದ್ವೀಪವು ರಾಮನಾಡಿನ ರಾಜನ ಭೂ ಮಾಲೀಕನಿಗೆ ಸೇರಿದ್ದ ಕಾರಣ ಈ ದ್ವೀಪವು ಭಾರತದ ಭಾಗವಾಗಿದೆ ಎಂದು ಭಾರತೀಯರ ಅಂಬೋಣ. ಮತ್ತು ಅಂದಿನ ಕಾಂಗ್ರೆಸ್ ಸರಕಾರ ಈ ದ್ವೀಪವನ್ನು ಸುಲಭವಾಗಿ ಶ್ರೀಲಂಕಾಕ್ಕೆ ಬಿಟ್ಟುಕೊಡುವ ಅಗತ್ಯವಿರಲಿಲ್ಲಾ ಎನ್ನುವುದು ಬಿಜೆಪಿಯ ವಾದ. ಭಾರತದ ಅವಿಭಾಜ್ಯ ಭಾಗವಾಗಿದ್ದ 'ಕಚ್ಚತೀವು' ನಡುಗಡ್ಡೆಯನ್ನು ಶ್ರೀಲಂಕಾಕ್ಕೆ ಹಸ್ತಾಂತರ ಮಾಡುವ ಮೂಲಕ ನೆಹರೂ ಕಾಲದಿಂದ ಇದ್ದ ಕಾಂಗ್ರೆಸ್‌ನ ಭಾರತವನ್ನು ಚೂರು ಮಾಡುವ ಕಾಯಕವನ್ನು ಇಂದಿರಾಗಾಂಧಿಯವರು ಮುಂದುವರೆಸಿ ಈ ವಿಷಯದಲ್ಲಿ ಅತ್ಯಂತ ತಪ್ಪು ನಿರ್ಧಾರವನ್ನು ಎಸಗಿದರು ಹಾಗೂ ಆಗ ತಮಿಳುನಾಡಿನಲ್ಲಿ ಆಡಳಿತದಲ್ಲಿದ್ದ ಡಿಎಂಕೆ ಸರಕಾರ ಕೇಂದ್ರದ ಈ ನಿರ್ಧಾರವನ್ನು ಪ್ರತಿರೋಧಿಸಲಿಲ್ಲ ಎನ್ನುವುದು ಪ್ರಧಾನಿ ಮೋದಿಯವರ ವಾದ. ಆಗ ಪ್ರಶ್ನೆ ಮಾಡದಿದ್ದವರು ಈಗ ಮೋದಿ ಈ ದ್ವೀಪವನ್ನು ಪುನಃ ಭಾರತಕ್ಕೆ ಸೇರಿಸಿ ವಿವಾದವನ್ನು ಸರಿಪಡಿಸಬೇಕೆಂದು ಪತ್ರ ಬರೆಯುತ್ತೀರಿ. ಇದು ಎಷ್ಟು ಸರಿ ಎಂದು ಸಂಸತ್ತಿನಲ್ಲಿ ಪ್ರಶ್ನಿಸಿದ್ದರು.

ಕಚ್ಚತೀವುವನ್ನು ಕಾಂಗ್ರೆಸ್ ಹೇಗೆ ಬೇಜವಾಬ್ದಾರಿಯಿಂದ ಬಿಟ್ಟುಕೊಟ್ಟಿತು ನೋಡಿ! ಇದು ಪ್ರತಿಯೊಬ್ಬ ಭಾರತೀಯನನ್ನೂ ಕೆರಳಿಸಿದೆ ಮತ್ತು ಜನರ ಮನಸ್ಸಿನಲ್ಲಿದ್ದ ಕಾಂಗ್ರೆಸ್ ಪಕ್ಷದ ದೇಶ ವಿರೋಧಿ ಧೋರಣೆಯನ್ನು ಮತ್ತೊಮ್ಮೆ ತೋರಿಸಿಕೊಟ್ಟಿದೆ. ನಾವು ಕಾಂಗ್ರೆಸ್ ಅನ್ನು ಎಂದಿಗೂ ನಂಬಲು ಸಾಧ್ಯವಿಲ್ಲ! ಭಾರತದ ಏಕತೆ, ಸಮಗ್ರತೆ ಮತ್ತು ಹಿತಾಸಕ್ತಿಗಳನ್ನು ದುರ್ಬಲಗೊಳಿಸುವುದೇ ಕಾಂಗ್ರೆಸ್‌ನ ಕೆಲಸ ಎಂದು ಪ್ರಧಾನಿ ಮೋದಿ ಗುಡುಗಿದರು. ರಾಷ್ಟ್ರೀಯ ಭದ್ರತೆಯ ದೃಷ್ಟಿಕೋನದಿಂದ ಅತ್ಯಂತ ಮುಖ್ಯವಾದ ಕಚ್ಚತೀವು ದ್ವೀಪವನ್ನು ಸ್ವಾತಂತ್ರ್ಯದ ನಂತರ ಕಾಂಗ್ರೆಸ್ ಸಲೀಸಾಗಿ ಬಿಟ್ಟುಕೊಟ್ಟಿತು. ದೇಶ ಸ್ವತಂತ್ರವಾದಾಗ ಈ ದ್ವೀಪ ನಮ್ಮಲ್ಲೇ ಇತ್ತು, ಆದರೆ 4-5 ದಶಕಗಳ ಹಿಂದೆ ಕಾಂಗ್ರೆಸ್ ಭಾರತದ ಒಂದು ಭಾಗವನ್ನು ಕತ್ತರಿಸಿ ಪ್ರತ್ಯೇಕಿಸಿತು. ಕಾಂಗ್ರೆಸ್ ಸರಕಾರದ ದುಷ್ಕೃತ್ಯಗಳಿಗೆ ಭಾರತ ಇನ್ನೂ ಬೆಲೆ ತೆರುತ್ತಿದೆ, ಇದು ಕಾಂಗ್ರೆಸ್ ದೇಶವಿರೋಧಿ ಕೃತ್ಯಕ್ಕೆ ಮತ್ತೊಂದು ನಿದರ್ಶನ ಎಂದು ಉತ್ತರ ಪ್ರದೇಶದ ಮೀರತ್‌ನಲ್ಲಿ ನಡೆದ ಚುನಾವಣಾ ಸಭೆಯಲ್ಲಿ ವಿಷಯ ಪ್ರಸ್ತಾಪ ಮಾಡಿದರು. ಇಲ್ಲಿರುವ ಮತ್ತೊಂದು ವಿಷಯವೆಂದರೆ ಈ ಹಿಂದೆ ಕಚ್ಚತೀವು ದ್ವೀಪವನ್ನು ಶ್ರೀಲಂಕಾಕ್ಕೆ ಬಿಟ್ಟುಕೊಡುವ ಒಪ್ಪಂದಕ್ಕೆ ತಕರಾರು ಮಾಡದೇ ಸಹಿ ಮಾಡಿದ್ದ ಅಂದಿನ ಡಿಎಂಕೆ ಪಕ್ಷದ ಮುಖ್ಯಮಂತ್ರಿಯಾಗಿದ್ದ ಕರುಣಾನಿಧಿಯವರು. ಆದರೆ ಈಗ ಭಿನ್ನ ನಿಲುವನ್ನು ತಳೆಯುವಂತೆ ನಾಟಕವಾಡುತ್ತಿರುವ ಡಿಎಂಕೆ ಪಕ್ಷದ ದ್ವಂದ್ವ ನಿಲುವಿನ ಕುರಿತು ಮೋದಿ ಕಿಡಿಕಾರಿದರು.

ಸುಮಾರು ಐದು ದಶಕಗಳ ಪೂರ್ವದಲ್ಲಿ ನಡೆದ ಈ ಸಂಗತಿಯ (ಐತಿಹಾಸಿಕ ಪ್ರಮಾದ) ಬಗ್ಗೆ ಪ್ರಧಾನಿ ಮೋದಿ ಅವರು ಈಗ ಮಾತನಾಡುವ ಬದಲು ಕಳೆದ 2-3 ವರ್ಷಗಳಲ್ಲಿ ಚೀನಾ ಗಡಿಯಲ್ಲಿ ಏನಾಯಿತು ಎಂಬುದರ ಬಗ್ಗೆ ಮಾತನಾಡುವುದು ಒಳಿತು. 1974ರ ಒಪ್ಪಂದವು ಪರಸ್ಪರ ಉತ್ತಮ ಸಂಬಂಧವನ್ನು ಹೊಂದಲು ಮತ್ತು ಅನೇಕ ತಮಿಳರ ಜೀವಗಳನ್ನು ಉಳಿಸಲು ಆದ ಒಪ್ಪಂದವಾಗಿದೆ ಎನ್ನುವುದು ಕಾಂಗ್ರೆಸ್ ಪಕ್ಷದ ಪಿ ಚಿದಂಬರಂ, ಮಲ್ಲಿಕಾರ್ಜುನ್ ಖರ್ಗೆ ಮತ್ತು ಇತರ ಹಿರಿಯ ಧುರೀಣರ ವಾದ. ಕಾಂಗ್ರೆಸ್ ಮತ್ತು ಡಿಎಂಕೆಯ ಎಲ್ಲ ನಾಯಕರ ಸಮರ್ಥನೆಯ ನಡುವೆಯೂ ತಮಿಳುನಾಡಿನಲ್ಲಿ ಈ ವಿಷಯ ಡಿಎಂಕೆಯನ್ನು ಇಕ್ಕಟ್ಟಿಗೆ ಸಿಲುಕಿಸಿದಿರುವುದಂತೂ ಸತ್ಯ.

ಕಚ್ಚತೀವು ದ್ವೀಪವು ಮತ್ತೆ ಭಾರತವನ್ನು ಸೇರುತ್ತದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಲೋಕಸಭಾ ಚುನಾವಣೆಯ ಈ ಸನ್ನಿವೇಶದಲ್ಲಿ ಮೋದಿಯವರಿಗೆ ರಾಷ್ಟ್ರಮಟ್ಟದಲ್ಲೂ ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ ಅವರಿಗೆ ರಾಜ್ಯ ಮಟ್ಟದಲ್ಲಿ ಇಡೀ ಚುನಾವಣೆ ಬಳಸಿಕೊಳ್ಳಲು ಸಿಕ್ಕಿರುವುದು ಅತ್ಯುತ್ತಮ ಅಸ್ತ್ರವೆಂದು ಹೇಳಲಾಗುತ್ತಿದೆ. ಈ ಒಂದು ವಿಷಯ ಅಣ್ಣಾಮಲೈ ಅವರಿಗೆ ತಮಿಳುನಾಡಿನಲ್ಲಿ ನಾಲ್ಕೈದು ಕ್ಷೇತ್ರಗಳಲ್ಲಿ ಜಯ ತಂದುಕೊಟ್ಟು ತಮಿಳುನಾಡಿನಲ್ಲಿ ಪ್ರಥಮ ಬಾರಿಗೆ ಕೇಸರಿ ಧ್ವಜವನ್ನು ಪ್ರತಿಷ್ಠಾಪಿಸಲು ಸಹಾಯ ಮಾಡಿದರೂ ಅಚ್ಚರಿಯಿಲ್ಲ ಎನ್ನುವುದು ರಾಜಕೀಯ ವಿಶ್ಲೇಷಕರ ಮಾತಾಗಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ತೆರಿಗೆ: ವಿರೋಧ ಎಷ್ಟು ಸರಿ?

ರಾಜಕೀಯ ಪಕ್ಷಗಳು ಆದಾಯ ತೆರಿಗೆಯಿಂದ ವಿನಾಯಿತಿ ಹೊಂದಿದ್ದರೂ ರಿಟರ್ನ್ಸ್ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ ರಿಟರ್ನ್ಸ್ ಸಲ್ಲಿಸದಿದ್ದಲ್ಲಿ ಅಥವಾ ತಡವಾದಲ್ಲಿ ದಂಡವಿಧಿಸಲಾಗುತ್ತದೆ. 2017-18 ರಿಂದ 2020-21 ರ ವರೆಗಿನ ಮೌಲ್ಯಮಾಪನ ವರ್ಷಗಳಿಗೆ ಅನ್ವಯವಾಗುವಂತೆ ವಿಧಿಸಲಾದ ದಂಡ ಮತ್ತು ಬಡ್ಡಿ ಸೇರಿ 1823 ಕೋಟಿ ರೂಗಳನ್ನು ಪಾವತಿಸುವಂತೆ ಆದಾಯತೆರಿಗೆ ಇಲಾಖೆ ಕಾಂಗ್ರೆಸ್ ಪಕ್ಷಕ್ಕೆ ನೋಟಿಸ್ ನೀಡಿರುವುದರಿಂದ ಕಾಂಗ್ರೆಸ್ ನಾಯಕರುಗಳು ಕೆಂಡಾಮಂಡಲವಾಗಿದ್ದಾರೆ. ಲೋಕಸಭೆ ಚುನಾವಣಾ ಸಮಯದಲ್ಲಿ ತಮ್ಮ ಪಕ್ಷವನ್ನು ಆರ್ಥಿಕವಾಗಿ ದುರ್ಬಲಗೊಳಿಸಲು ಆದಾಯ ತೆರಿಗೆ ಇಲಾಖೆ ನೋಟಿಸ್ ನೀಡುತ್ತಿದೆಯೆಂದು ಇದೊಂದು ರೀತಿಯ ತೆರಿಗೆ ಭಯೋತ್ಪಾದನೆಯೆಂದು ಕಾಂಗ್ರೆಸ್ ಪಕ್ಷ ಆರೋಪಿಸಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ ಮತ್ತು ಸಿಬಿಐ ನಂತಹ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆಯೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ಸತತವಾಗಿ ಐದುವರ್ಷಗಳ ಕಾಲ ದಂಡವನ್ನು ಕಟ್ಟದೆ ಇದೀಗ ಆದಾಯ ತೆರಿಗೆ ಇಲಾಖೆ ನೋಟಿಸ್ ನೀಡಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸುತ್ತಾ ಕೇಂದ್ರ ಸರಕಾರವನ್ನು ದೂಷಿಸುತ್ತಿರುವುದು, ಆದಾಯ ತೆರಿಗೆ ಇಲಾಖೆ ತನ್ನ ವಿರುದ್ಧ ಪ್ರಾರಂಭಿಸಿದ ಮರು ಮೌಲ್ಯಮಾಪನವನ್ನು ಪ್ರಶ್ನಿಸಿ ಕಾಂಗ್ರೆಸ್ ಪಕ್ಷ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದ್ದರೂ ಆದಾಯ ತೆರಿಗೆ ಇಲಾಖೆ ನೀಡಿದ ನೋಟಿಸ್ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಎಷ್ಟರಮಟ್ಟಿಗೆ ಸರಿ. ಒಂದು ವೇಳೆ ಆಯಾ ಮೌಲ್ಯಮಾಪನ ವರ್ಷಗಳಲ್ಲಿ ರಿಟರ್ನ್ಸ್ ಸಲ್ಲಿಸಿದ್ದಿದ್ದರೆ ಇಂದು ಆದಾಯ ತೆರಿಗೆ ಇಲಾಖೆ ಕಾಂಗ್ರೆಸ್ ಪಕ್ಷಕ್ಕೆ ನೋಟಿಸ್ ನೀಡುವ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಕೇಂದ್ರ ಸರಕಾರ ಮತ್ತು ಆದಾಯ ತೆರಿಗೆ ಇಲಾಖೆಯನ್ನು ಟೀಕಿಸುತ್ತಾ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಮತ್ತು ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮತದಾರರ ಅನುಕಂಪಗಳಿಸುವ ಮೂಲಕ ಅಧಿಕಾರದ ಗದ್ದುಗೆ ಏರಲು ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಷಡ್ಯಂತ್ರವೆಂದು ಮೇಲ್ನೋಟಕ್ಕೆ ಕಾಣಿಸುತ್ತದೆ.

-ಜಿ.ನಾಗೇಂದ್ರ ಕಾವೂರು ಬೆಂಗಳೂರು

ವೋಟು ಮೋದಿಗೆ!

ಆಕಾಶದಿಂದ ಬಿದ್ದ ಮಳೆ ಹೇಗೆ ಸಾಗರವನ್ನು ಸೇರುತ್ತದೋ, ಯಾವ ದೇವರಿಗೆ ನಮಸ್ಕರಿಸಿದರೂ ಅದು ಹೇಗೆ ಕೇಶವನಿಗೇ ತಲುಪುತ್ತದೆಯೋ, ಅದೇ ರೀತಿ ಈ ಬಾರಿ ಬಿಜೆಪಿ ಯಾರನ್ನೇ ಅಭ್ಯರ್ಥಿಯಾಗಿದ್ದರೂ ಕೊಡುವ ಮತಗಳೆಲ್ಲ ನರೇಂದ್ರ ಮೋದಿಯವರಿಗೇ ಸಲ್ಲುತ್ತದೆ!

ಈ ಮಾತಲ್ಲಿ ಅತಿಶಯೋಕ್ತಿಯಿಲ್ಲ. ಬಿಜೆಪಿ, ಹಲವು ಪ್ರಯೋಗಗಳಿಗೆ ಮುಂದಾಗುತ್ತಿದೆ. ಹೊಸ ಮುಖಗಳಿಗೆ ಅವಕಾಶ ಎಂಬ ಘೋಷವಾಕ್ಯವನ್ನು ಮುಂದಿಟ್ಟು ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುತ್ತಿದೆ. ಇದರಲ್ಲಿ ಬಹುತೇಕರು ತೀರಾ ಹೊಸಬರಾದರೂ, ಈ ಹಿಂದೆ ಹೆಸರು ಮಾಡಿದವರ ಕುಟುಂಬದ ಕುಡಿಯೆಂದೋ ಅಥವಾ ಹಾಲಿ ಬೆಳಕಿನಲ್ಲಿದ್ದ ನಾಯಕರ ಸಂಬಂಧಿಯೆಂದೋ, ಯಾರನ್ನೋ ಕಡೆಗಾಣಿಸಲು ಇನ್ನಾರಿಗೋ ಟಿಕೆಟ್ ಕೊಟ್ಟಿರುವ, ಹೀಗೆ ಹಲವು ಬಗೆಯ ಪ್ರಯೋಗ ನಡೆಯುತ್ತಿರುವುದು ತಿಳಿದಿದ್ದೆ.

ಈ ಎಲ್ಲ ಪ್ರಯೋಗದ ನಡುವೆಯೂ ಕೆಲಸ ಮಾಡುವ ಮಂತ್ರವೆಂದರೆ, 'ಮತ್ತೊಮ್ಮೆ ಮೋದಿ ಪ್ರಧಾನಿ' ಎಂಬುದನ್ನು ಬಿಟ್ಟರೆ ಇನ್ಯಾವುದೂ ಅಲ್ಲ. ಹೇಗೂ 'ಮೋದಿ' ನಾಮಬಲವೊಂದಿದ್ದರೆ ಸಾಕೋ, ಉಳಿದವರ ಹಂಗ್ಯಾಕೋ ಎನ್ನುವಂತೆ ಕಾಣುತ್ತಿದೆ. ಪಕ್ಷದಲ್ಲಿ ಟಿಕೆಟ್ ಕೈ ತಪ್ಪಿ, ಬಂಡಾಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಬೇಕೆನ್ನುವವರೂ, ಸ್ವತಂತ್ರವಾಗಿ ನಿಂತು, ಆರಿಸಿ ಬಂದು, ಮತ್ತೊಮ್ಮೆ ಮೋದಿ ಪ್ರಧಾನಿಯಾಗುವಂತೆ ಶ್ರಮಿಸುತ್ತೇನೆ ಎನ್ನುತ್ತಿದ್ದಾರೆ. ಇನ್ನು, ಪ್ರತಿನಿಧಿಸುತ್ತಿರುವ ಕ್ಷೇತ್ರದಲ್ಲಿ ಈ ಹಿಂದೆ ಯಾವುದೇ ಹೇಳಿಕೊಳ್ಳುವ ಕೆಲಸ ಮಾಡದಿದ್ದರೂ, ಮತ್ತೆ ಟಿಕೆಟ್ ಪಡೆದು ಆರಿಸಿ ಬರುವ ಉತ್ಸುಕತೆ ತೋರುತ್ತಿರುವುದೂ ಸ್ವಂತ ಬಲದ ಆಧಾರದ ಮೇಲಲ್ಲ, ಬದಲಿಗೆ ಮೋದಿ ಹೆಸರಲ್ಲಿ ಚುನಾವಣೆ ನಡೆಯುತ್ತದೆ ಎನ್ನುವ ವಿಶ್ವಾಸದ ಮೇಲೆ.

ಇನ್ನು, ಮತದಾರನ ಸ್ಥಿತಿಯೂ ಭಿನ್ನವಲ್ಲ. ತಮ್ಮ ಕ್ಷೇತ್ರದ ಅಭ್ಯರ್ಥಿ ನಾವು ಅಂದುಕೊಂಡಂತೆ ಆಗದಿದ್ದರೂ ಏನಂತೆ, ನಾವು ಮತ ಹಾಕುವುದು ಮೋದಿ ಮತ್ತೊಮ್ಮೆ ಪ್ರಧಾನಿ ಗಾದಿಯಲ್ಲಿ ಕೂರಲಿ ಎನ್ನುವ ಕಾರಣಕ್ಕೆ. ತಮ್ಮ ಶಕ್ತಿ, ಸಾಮರ್ಥ್ಯ, ಜನಹಿತ ಕಾರ್ಯಗಳೆಲ್ಲ ಏನೇ ಇದ್ದರೂ, ಜನ ನೋಡುವುದು ಮೋದಿಯನ್ನೇ ಹೊರತು ತಮ್ಮನ್ನಲ್ಲ ಎಂಬುದು ಖಾತ್ರಿಯಾಗಿಬಿಟ್ಟಿದೆ. ಇದು ನಿಜಕ್ಕೂ ಒಳ್ಳೆಯ ಲಕ್ಷಣವೇ? ಸಲಹುವಾತ ಎಷ್ಟೆಂದು ಸಲಹಲು ಸಾಧ್ಯ?

- ಶಂಕರನಾರಾಯಣ ಭಟ್ ಹೊನ್ನಾವರ

ಊರಿಗೆ ರಸ್ತೆ ಕೊಡಿ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಜ ದೇವಸ್ಥಾನದ ಸಮೀಪ ಸಂಪ ಎಂಬ ಸಣ್ಣ ಹಳ್ಳಿಯಲ್ಲಿ ಸುಮಾರು ಐದು ಮನೆಗಳಿಗೆ ಮಾರ್ಗದ ಸೌಲಭ್ಯವಿಲ್ಲ. ಯಾವುದೇ ವಸ್ತುವನ್ನು ಮನೆಗೆ ತರಬೇಕೆಂದರೂ ಅಥವಾ ಅನಾರೋಗ್ಯವಾದರೂ ಆ ಕಾಲು ಮಾರ್ಗದಲ್ಲಿ ನಡೆದು ಹೋಗುವ ಪರಿಸ್ಥಿತಿಯಿದೆ. ಕಾಲು ದಾರಿ ಕೂಡ ವ್ಯವಸ್ಥಿತವಾಗಿ ಇಲ್ಲವಾಗಿದೆ.

ಪಂಚಾಯತಿ ದಾರಿಯಾಗಿದ್ದರೂ ನಡೆದುಕೊಂಡು ಹೋಗಲು ಕಷ್ಟಕಾರವಾಗಿದೆ. ಪ್ರತಿ ವರ್ಷವೂ ಮಳೆಗಾಲದಲ್ಲಿ ನಡೆದುಕೊಂಡು ಹೋಗಲು ತುಂಬಾ ಸಮಸ್ಯೆಯಾಗುತ್ತಿದೆ. ಐದೇ ಮನೆಗಳಾಗಿರುವುದರಿಂದ ಮಾರ್ಗ ಕಲ್ಪಿಸುವ ವಿಷಯದಲ್ಲಿ ಆಡಳಿತದಲ್ಲಿರುವವರೂ ಹೆಚ್ಚು ತಲೆಕೆಡಿಸಿಕೊಂಡಿಲ್ಲ.

ಹಲವು ವರ್ಷಗಳಿಂದ ಈ ಮನೆಗಳಿಗೆ ಸೂಕ್ತ ರಸ್ತೆ ಕಲ್ಪಿಸುವಂತೆ ಮನವಿ ಸಲ್ಲಿಸಿದರೂ, ಯಾವುದೇ ಪ್ರಯೋಜನವಾಗಿಲ್ಲ. ಈಗಿನ ಕಾಲದಲ್ಲಿ ಮನೆಗಳಿಗೆ ರಸ್ತೆ ಸೌಲಭ್ಯವಿಲ್ಲದಿರುವುದು ಬಹಳ ಅಪರೂಪ. ಮಾರ್ಗ ಸೌಲಭ್ಯ ವಂಚಿತರಾದ ಈ ಮನೆಗಳ ಜನರು ತುಂಬಾ ವರ್ಷದಿಂದ ಮಾರ್ಗದ ಸೌಲಭ್ಯ ಸಿಗಬಹುದು ಎನ್ನುವ ಆಶಾಭಾವನೆಯಲ್ಲಿದ್ದಾರೆ. ಆದ್ದರಿಂದ ಇನ್ನಾದರೂ ಸಂಬಂಧಪಟ್ಟ ಇಲಾಖೆಗಳು ಈ ಐದು ಮನೆಗಳಿಗೆ ಮಾರ್ಗ ಸೌಲಭ್ಯ ಮಾಡಿಕೊಡಬೇಕು.

- ಜಯಶ್ರೀ .ಸಂಪ ಪಂಜ

ಅಧಿಕಾರ ಕೊಟ್ಟವರ್ಯಾರು?

ಭಾರತದ ಈಶಾನ್ಯ ರಾಜ್ಯವಾದ ಅರಣಾಚಲ ಪ್ರದೇಶಕ್ಕೆ ಚೀನಾ 'ಝಂಗ್ನಾನ್'ನ' ಎಂಬ ಹೆಸರಿಟ್ಟಿದೆ. ಇಷ್ಟು ಮಾತ್ರವಲ್ಲದೇ ಇತರ 30 ವಿವಿಧ ಸ್ಥಳಗಳಿಗೂ ಹೆಸರನ್ನು ಇಟ್ಟಿದೆ. ಈ ರೀತಿ ಹೆಸರು ಬದಲಾಯಿಸುವ ಘಟನೆ ನಡೆಯುತ್ತಿರುವುದು ಇದೇ ಮೊದಲಲ್ಲ. ಇದಕ್ಕೂ ಮೊದಲು ಚೀನಾದ ನಾಗರಿಕ ವ್ಯವಹಾರಗಳ ಸಚಿವಾಲಯ 2017, 2021 ಮತ್ತು 2023ರಲ್ಲಿ ಅರುಣಾಚಲದ ವಿವಿಧ ಸ್ಥಳಗಳಿಗೆ ಚೀನಿ ಹೆಸರನ್ನು ಇಟ್ಟಿತ್ತು. ಒಂದು ದೇಶದ ರಾಜ್ಯಕ್ಕೆ ಬೇರೆ ದೇಶದವರು ಹೆಸರಿಡುವ ಉದ್ದೇಶವೇನು, ಇಂತಹ ಹೆಸರನ್ನು ಚೀನಾ ನಾಳೆ ಕೋಡ್‌ವರ್ಡ್ ಆಗಿ ಬಳಸಿಕೊಂಡು ಆ ಪ್ರದೇಶದ ಮೇಲೆ ಹಿಡಿತ ಸಾಧಿಸುವ ಹುನ್ನಾರ ಏನಾದರೂ ಮಾಡುತ್ತಿದೆಯಾ? ಇದರ ಬಗ್ಗೆ ಭಾರತದ ಸಚಿವಾಲಯ ಕಠಿಣ ಕ್ರಮ ಕೈಗೊಳ್ಳಬೇಕು. ಹಾಗೂ ಇಂತಹ ಘಟನೆಗಳ ಕುರಿತಾಗಿ ವಿಶ್ವಸಂಸ್ಥೆಯ ಗಮನಕ್ಕೆ ತಂದು ನಮ್ಮ ಸೇನೆ ಹಾಗೂ ಭೂ ಭಾಗಗಳ ಭದ್ರತೆಗೆ ಹೆಚ್ಚು ಒತ್ತು ನೀಡಬೇಕು. ನಮ್ಮ ದೇಶದ ಅಭಿವೃದ್ಧಿಯನ್ನು ನೋಡಿ ಅದರ ಮೇಲೆ ಹಿಡಿತ ಸಾಧಿಸುವ ಮನೋಭಾವನೆಯನ್ನು ಚೀನಾ ಸರಕಾರ ಬಿಡಬೇಕು.

- ಸುರೇಂದ್ರ ಪೈ, ಹೊಸದುರ್ಗ